

## ಮೂರು ವರಗಳು

ಒಬ್ಬ ಕುಡುಕ ದೇವರನ್ನು ಕುರಿತು ತಪಸ್ಸು ಮಾಡಿದ. ಅವನ ಭಕ್ತಿಗೆ ಮೆಚ್ಚಿದ ದೇವರು ಪ್ರತ್ಯಕ್ಷನಾಗಿ ಮೂರು ವರಗಳನ್ನು ಕೊಡುವುದಾಗಿ ಹೇಳಿದ. ಕುಡುಕ ಕೇಳಿದ 'ಎಂದೂ ಖಾಲಿಯಾಗದ ಒಂದು ವಿಸ್ಕಿ ಬಾಟಲನ್ನು ಕೊಡು'.

ಅವನ ಮುಂದೆ ಅಂತಹ ಬಾಟಲ್ ಬಂತು. ಕುಡುಕ ಅದನ್ನು ಖಾಲಿ ಮಾಡಿದ ಹಾಗೆಲ್ಲಾ ಅದು ಭರ್ತಿಯಾಗುತ್ತಿತ್ತು. ಇನ್ನೆರಡು ವರ ಕೊಡಲು ಕಾಯುತ್ತಿದ್ದ ದೇವರು 'ಇನ್ನೇನು ಬೇಕು' ಎಂದು ಕೇಳಿದಾಗ ಕುಡುಕ ಹೇಳಿದ 'ಇಂತಹ ಇನ್ನೆರಡು ಬಾಟಲುಗಳನ್ನು ಕೊಡು!'

★★★

## ಹದಿನೇಳನೆಯ ಅಧ್ಯಾಯ

ಒಬ್ಬ ಪಾದ್ರಿ ಅಂದಿನ ಪ್ರವಚನವನ್ನು ಮುಗಿಸುವ ಮುನ್ನ ಹೇಳಿದರು. 'ಮುಂದಿನ ವಾರ ನಾನು ಸುಳ್ಳುಗಾರರ ವಿಷಯವಾಗಿ ಮಾತನಾಡುವವನಿದ್ದೇನೆ. ಅದಕ್ಕೆ ಮೊದಲ ತಯಾರಿಯಾಗಿ ನೀವೆಲ್ಲರೂ ಒಂದು ಕೆಲಸ ಮಾಡಬೇಕು. ದಯಮಾಡಿ ಮಾರ್ಕನ ಹದಿನೇಳನೆಯ ಅಧ್ಯಾಯವನ್ನು ಎಲ್ಲರೂ ಓದಿಕೊಂಡು ಬನ್ನಿ.'

ಮುಂದಿನ ಭಾನುವಾರ ಮತ್ತೆ ಚರ್ಚ್‌ನಲ್ಲಿ ಸಭೆ ಸೇರಿದಾಗ, ಪಾದ್ರಿಗಳು ಹೇಳಿದರು: 'ನಾನು ಹೇಳಿದಂತೆ ನೀವೆಲ್ಲರೂ ಮಾಡಿರುವಿರಿ ಎಂಬ ನಂಬಿಕೆ ನನಗಿದೆ. ಮಾರ್ಕನ ಹದಿನೇಳನೆಯ ಅಧ್ಯಾಯವನ್ನು ಓದಿದವರೆಲ್ಲರೂ ದಯಮಾಡಿ ನಿಮ್ಮ ಕೈಗಳನ್ನು ಮೇಲೆತ್ತಿ.' ಅಲ್ಲಿದ್ದ ಎಲ್ಲರೂ ತಮ್ಮ ಕೈಗಳನ್ನು ಮೇಲೆತ್ತಿದರು.

ಆಗ ಪಾದ್ರಿಗಳು ನಸುನಗುತ್ತಾ ಹೇಳಿದರು. 'ನನಗೆ ಉಪದೇಶಕ್ಕೆ ನಿಮ್ಮಂತವರೇ ಬೇಕಾಗಿದ್ದುದು. ಮಾರ್ಕನ ಹದಿನೇಳನೆಯ ಅಧ್ಯಾಯ ಇಲ್ಲವೇ ಇಲ್ಲ, ನೀವೆಲ್ಲರೂ ನನ್ನನ್ನು ಮೆಚ್ಚಿಸಲು ಸುಳ್ಳು ಹೇಳಿದ್ದೀರಿ!'

ಸಂಗ್ರಹ: ಕೆ.ಪಿ.ಸತ್ಯನಾರಾಯಣ



ಹೋಟೆಲ್‌ನಲ್ಲಿ ತಿಂಡಿ ತಿಂದ ಬಳಿಕ ಮಂಟಾಗೆ ವೇಟರ್ ಬಿಲ್ ಕೊಟ್ಟ.

ಮಂಟಾ: ತಗೋ ಈ ಕಾರ್ಡ್.

ವೇಟರ್ : ಅರೇ, ಇದು ನಿಮ್ಮ ರೇಷನ್ ಕಾರ್ಡ್ ಸಾರ್

ಮಂಟಾ : ರೇಷನ್ ಕಾರ್ಡ್ ಆದರೆ ಏನಾಯ್ತು? ನಿಮ್ಮ ಕೌಂಟರಿನಲ್ಲೇ ಬೋರ್ಡ್ ಹಾಕಿದಾರಲ್ಲ? 'ಇಲ್ಲಿ ಎಲ್ಲ ಕಾರ್ಡ್‌ಗಳನ್ನೂ ಸ್ವೀಕರಿಸಲಾಗುವುದು' ಎಂದು.

(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ

